





# ಬೃಹತ್ ಕುಂಬಳಕಾಯಿ...

ಅಬ್ಬಾ..ಇದೇನು ಮಹಾ ಕುಂಬಳಕಾಯಿ? ಎಂದು ನೋಡುಗರೆಲ್ಲಾ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ್ದು ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ಯೂರೋಪಿಯನ್ ಕುಂಬಳಕಾಯಿ ಮೇಳದಲ್ಲಿ. ಜರ್ಮನಿಯ ಲುಡ್ವಿಸ್‌ಬರ್ಗ್‌ನಲ್ಲಿ ಇತ್ತೀಚೆಗೆ ನಡೆದ ಮೇಳದಲ್ಲಿ ಪ್ರದರ್ಶನಗೊಂಡ ಈ ಸಿಹಿ ಕುಂಬಳಕಾಯಿ ಈವರೆಗೆ ಇದ್ದ ಅತಿ ದೊಡ್ಡ ತೂಕದ ಕುಂಬಳಕಾಯಿಯ ಎಲ್ಲ ದಾಖಲೆಯನ್ನು ಮುರಿಯಿತು.

ಸ್ವಿಝರ್ಲ್ಯಾಂಡಿನ ರೈತ ಬೆನಿ ಮಿಯೆರ್ ಬೆಳೆದ ಈ ಬೃಹತ್ ಕುಂಬಳಕಾಯಿ ಬರೋಬ್ಬರಿ 2,323 ಪೌಂಡ್, ಅಂದರೆ 1054 ಕೆಜಿಯಷ್ಟು ತೂಕವಿತ್ತು. ಈ ಕುಂಬಳಕಾಯಿಯನ್ನು ಹೊಲದಿಂದ ಕಿತ್ತು ಪ್ರದರ್ಶನಕ್ಕೆ ಸಾಗಿಸಲು ವಿಶೇಷವಾದ ಮಿನಿ ಕ್ರೇನ್ ವ್ಯವಸ್ಥೆಯನ್ನು ಬೆನಿ ಮಾಡಿದ್ದ. ನೋಡಲು ಪುಟ್ಟ ಕಾರ್‌ನಂತೆ ಕಾಣುತ್ತಿದ್ದ ಈ ಕುಂಬಳಕಾಯಿಯನ್ನು ಪ್ರದರ್ಶನ ಮುಗಿದ ಬಳಿಕ ಹೋಳು ಮಾಡಿದರಂತೆ. ಅದರ ಬೀಜಕ್ಕಂತೂ ಭಾರೀ ಬೇಡಿಕೆ ಇತ್ತು ಎಂದು ಬೆನಿ ಹೇಳಿದ್ದಾನೆ.

ಅಂದ ಹಾಗೆ ಈ ಹಿಂದಿನ ಅತಿ ದೊಡ್ಡ ಸಿಹಿ ಕುಂಬಳಕಾಯಿಯ ದಾಖಲೆ ಅಮೆರಿಕಾದ ಪೀಟರ್ ಮತ್ತು ಸಿಂಡಿ ಬೆಳೆದ 2036 ಪೌಂಡ್ ತೂಕದ ಕುಂಬಳಕಾಯಿಯದ್ದಾಗಿತ್ತು. ಆ ದಾಖಲೆಯನ್ನು ಕೆಲವೇ ದಿನಗಳ ಅಂತರದಲ್ಲಿ ಸ್ವಿಝರ್ಲ್ಯಾಂಡಿನ ಬೆನಿ ಮಿಯೆರ್‌ನ ಕುಂಬಳಕಾಯಿ ಅಳಿಸಿ ಹಾಕಿದೆ. ಈ ಹಿಂದೆಯೂ ಬೆನಿ ಮಿಯೆರ್ ಭಾರೀ ತೂಕದ ಸಿಹಿ ಕುಂಬಳಕಾಯಿ ಬೆಳೆದು ಸುದ್ದಿ ಮಾಡಿದ್ದಾನೆ.

■ ಕಿರಣ್ ಇಜಿಮಾನ್